**ಕರ್ನಾಟಕ ವಿಧಾನ ಪರಿಷತ್ತು**

**136ನೇ ಅಧಿವೇಶನ**

**ಲಘು ಪ್ರಕಟಣೆ ಭಾಗ–2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ: 07ನೇ ಡಿಸೆಂಬರ್, 2018**

**ಸಂಖ್ಯೆ:47**

**ಬೆಳಗಾವಿ ಅಧಿವೇಶನದ ಸಂಬಂಧ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳ ಮಾಹಿತಿಗಾಗಿ**

01. ನೂರ ಮೂವತ್ತಾರನೆಯ ಅಧಿವೇಶನವು ದಿನಾಂಕ: 10ನೇ ಡಿಸೆಂಬರ್, 2018 ರಿಂದ 21ನೇ ಡಿಸೆಂಬರ್, 2018ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವುದರಿಂದ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮ 2ರಂತೆ ವಿಧಾನ ಪರಿಷತ್ತಿನ ಸಚಿವಾಲಯವು ಶನಿವಾರ ದಿನಾಂಕ: 8ನೇ ಡಿಸೆಂಬರ್, 2018ರಿಂದ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಕಾರ್ಯನಿರ್ವಹಿಸಲಿದೆ.

02. ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಬೆಳಗಾವಿ ನಗರದಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಲಾಗಿದೆ. ಮಾನ್ಯ ಸದಸ್ಯರುಗಳಿಗೆ ದಿನವೊಂದಕ್ಕೆ ರೂ.2,500/–ರಂತೆ **'ಸಾರಿಗೆ ಭತ್ಯೆ'**ಯನ್ನು ಮಾನ್ಯ ಸದಸ್ಯರುಗಳ ವಾಸ್ತವ್ಯ ಮತ್ತು ಹಾಜರಾತಿಯ ಆಧಾರದ ಮೇಲೆ ಪಾವತಿಸಲು ತೀರ್ಮಾನಿಸಲಾಗಿದೆ. ಆದುದರಿಂದ, ಮಾನ್ಯ ಸದಸ್ಯರುಗಳೆ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಳ್ಳಲು ಕೋರಲಾಗಿದೆ.

03. ಅಧಿವೇಶನದ ಸಂದರ್ಭದ ವಸತಿ ಸೌಕರ್ಯದ ಮಾಹಿತಿಯನ್ನು **ಶ್ರೀ ವೆಂಕನಗೌಡ ಪಾಟೀಲ್, ಉಪ ಕಾರ್ಯದರ್ಶಿ (ಮೊಬೈಲ್ ದೂರವಾಣಿ ಸಂಖ್ಯೆ: 9880538471) ಹಾಗೂ ಶ್ರೀ ಎಸ್.ಎ. ಮೊಹಿಯುದ್ದೀನ್, ಅಧೀನ ಕಾರ್ಯದರ್ಶಿ (ಕ್ಷೇತ್ರಾಧಿಕಾರಿ) (ಮೊಬೈಲ್ ದೂರವಾಣಿ ಸಂಖ್ಯೆ: 9844330469)** ಇವರುಗಳ ಮುಖೇನ ಪಡೆದುಕೊಳ್ಳಲು ಕೋರಲಾಗಿದೆ.

04. ಅಧಿವೇಶನದಲ್ಲಿ ಪಾಲ್ಗೊಳ್ಳುವ ಮಾನ್ಯ ಸದಸ್ಯರ ಜೊತೆಯಲ್ಲಿ ಆಗಮಿಸುವ ಆಪ್ತ ಸಹಾಯಕರುಗಳು ಹಾಗೂ ಭದ್ರತಾ ಸಿಬ್ಬಂದಿಗಳಿಗೆ ಬೆಳಗಾವಿಯಲ್ಲಿ ವಸತಿ ಹಾಗೂ ಸಾರಿಗೆ ಸೌಕರ್ಯವನ್ನು ಪ್ರತ್ಯೇಕವಾಗಿ ಒದಗಿಸಲು ಸಾಧ್ಯವಾಗುವುದಿಲ್ಲವೆಂದು, ಜಿಲ್ಲಾಡಳಿತವು ತಿಳಿಸಿರುವ ಹಿನ್ನಲೆಯಲ್ಲಿ ತಾವೇ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಿಕೊಳ್ಳಲು ಕೋರಲಾಗಿದೆ.

05. ಮಾನ್ಯ ಸದಸ್ಯರುಗಳ ವಾಹನ ಚಾಲಕರುಗಳಿಗೆ ವಸತಿ ವ್ಯವಸ್ಥೆಯನ್ನು ಒದಗಿಸಿದ್ದು, ಮಾನ್ಯ ಸದಸ್ಯರುಗಳು ತಮ್ಮ ವಾಹನ ಚಾಲಕರುಗಳಿಗೆ ದೃಢೀಕರಣ ಪತ್ರವನ್ನು ನೀಡಬೇಕೆಂದು ಹಾಗೂ

ಸದರಿ ದೃಢೀಕರಣ ಪತ್ರದೊಂದಿಗೆ ಚಾಲಕರು ವಸತಿ ಸೌಲಭ್ಯಕ್ಕಾಗಿ ಬೆಳಗಾವಿಯ ಜಿಲ್ಲಾಧಿಕಾರಿಯ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

06. ಅಧಿವೇಶನದ ಸಮಯದಲ್ಲಿ ಮಾನ್ಯ ಸದಸ್ಯರುಗಳಿಗೆ ಬೆಳಗಿನ ಉಪಹಾರವನ್ನು ಅವರುಗಳು ವಾಸ್ತವ್ಯ ಹೂಡಲಿರುವ ಹೋಟೆಲ್‌ಗಳಲ್ಲಿಯೇ ವ್ಯವಸ್ಥೆ ಮಾಡಲಾಗಿದ್ದು, ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಸುವರ್ಣ ವಿಧಾನಸೌಧದಲ್ಲಿ ಏರ್ಪಡಿಸಲಾಗಿರುತ್ತದೆ. ರಾತ್ರಿ ಊಟದ ವ್ಯವಸ್ಥೆಯನ್ನು ಮಾನ್ಯ ಸದಸ್ಯರುಗಳೇ ಮಾಡಿಕೊಳ್ಳಲು ಕೋರಲಾಗಿದೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ(ಪ್ರ)**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

**www.kla.kar.nic.in/council.htm**